ತಾಲ್ಲೂಕುಗಳಿಗೂ ಕೋರ್ಟುಗಳನ್ನು ಕೊಡಬೇಕೇ ಬೇಡವೇ ಎನ್ನುವುದಕ್ಕೆ ಮಾತ್ರ ಹೈಕೋರ್ಟನ್ನು ಕೇಳುವುದು.

ಶ್ರೀ ಎಸ್. ಎಂ. ಶೀರನವಳಿ ಚಂದ್ರಶೇಖರ್.—ಈಗ ಭೂಸುಧಾರಣೆಯಲ್ಲಿ 16 ಕಿಲೋ ಮೀಟರು ದೂರದಲ್ಲಿ ಇದ್ದು ಬೇಸಾಯ ಮಾಡಬೇಕೆಂದು ಇರುವುದರಿಂದ ಎಲ್ಲ ತಾಲ್ಲೂಕುಗಳಲ್ಲೂ ಕೋರ್ಟುಗಳಾದರೆ ಆಗ ಅಲ್ಲಿರುವ ವಕೀಲರುಗಳಿಗೆ ಅನುಕೂಲವಾಗುತ್ತದೆ. ಅದಕ್ಕಾಗಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೆಲ್ಲ ಒಂದು ಕೋರ್ಟನ್ನೇಕೆ ಮಾಡಬಾರದು ?

ಶ್ರೀ ಡಿ. ಕೆ. ನಾಯಕರ್.—ಮಾನ್ಯ ಸದಸ್ಯರು ವಕೀಲರಾಗಿರುವಂತೆ ನಾನೂ ಒಬ್ಬ ವಕೀಲನಾಗಿದ್ದೇನೆ. 16 ಕಿಲೋ ಮೀಟರು ಎನ್ನುವುದರ ಅರ್ಥವನ್ನು ಮಾನ್ಯ ಸದಸ್ಯರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದು ತೋರುತ್ತೆ. ನಮ್ಮ ಮುಂಬಯಿ ಕರ್ನಾಟಕದ ಮಸೂದೆಯಲ್ಲಿ 5 ಮೈಲಿ ದೂರಗಳಲ್ಲಿ ಎಂದು ಇತ್ತು. ಇಲ್ಲಿ 16 ಕಿಲೋಮೀಟರು ಎಂದು ಇದೆ. ಇದರಲ್ಲಿ ಫ್ಯಾಮಿಲಿ ಎನ್ನುವುದರ ಡೆಫಿನಿಷನ್‌ನಲ್ಲಿ ಹಸ್‌ಬೆಂಡ್, ವೈಫ್ ಮತ್ತು ಮೈನರ್ ಚಿಲ್ಡ್ರನ್ ಎಂದು ಇದೆ. ಇದರಂತೆ ಫ್ಯಾಮಿಲಿ ಮೆಂಬರ್ಸ್‌ಗಳಲ್ಲಿ ಯಾರಾದರೂ ಒಬ್ಬರು ಇದ್ದುಕೊಂಡು ವ್ಯವಸಾಯ ಮಾಡಿಕೊಳ್ಳಬಹುದು. ಅದರಂತೆ ಇಲ್ಲೂ ಕೂಡ ಆಯಾ ಕುಟುಂಬಕ್ಕೆ ಸೇರಿದವರು ಕಲ್ಪವೇಟು ಮಾಡಲು ಅವಕಾಶವಿದೆ, ಇದರಿಂದ ವಕೀಲರಿಗೆ ತೊಂದರೆ ಯಾಗುತ್ತದೆ ಎಂದು ನಾನು ಭಾವಿಸಿಲ್ಲ.

ಶ್ರೀ ಪಿ. ಎಂ. ಬಂಗಿ.—ಬಿಜಾಪುರ ಜಿಲ್ಲೆಯಲ್ಲಿರುವ ಬಿಳಿಗಿ ಹಾಗೂ ಇನ್ನೊಂದು ತಾಲ್ಲೂಕಿಗೆ ಕೋರ್ಟು ಕೊಡಬೇಕೆಂದು ಮನವಿ ಮಾಡಲಾಗಿತ್ತು. ಇದು ಯಾವ ಹಂತದಲ್ಲಿದೆ ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ಡಿ. ಕೆ. ನಾಯಕರ್.—ಈ ಪ್ರಶ್ನೆಗೆ ಇದು ಸಂಬಂಧಪಟ್ಟಿಲ್ಲ ಮತ್ತು ಇದರ ಬಗ್ಗೆ ಮಾಹಿತಿಯನ್ನೂ ನಾವು ಕಲೆಕ್ಟ್ ಮಾಡಿಲ್ಲ.

ಶ್ರೀ ಮಲ್ಲಿಕಾರ್ಜುನಕಾರ್ಗೆ.—ಪ್ರತಿ ತಾಲ್ಲೂಕಿನಲ್ಲೂ ಕೋರ್ಟುಗಳಿಲ್ಲದೆ ಇದ್ದರೆ ಸರಕಾರ ಎಲ್ಲ ಕಡೆಗೂ ಮೊಬೈಲ್ ಕೋರ್ಟುಗಳನ್ನು ಮಾಡುವುದರ ಬಗ್ಗೆ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಡಿ. ಕೆ. ನಾಯಕರ್.—ಮೊಬೈಲ್ ಕೋರ್ಟುಗಳನ್ನು ಕೊಡಬೇಕಾದರೂ ಸರಕಾರದವರು ಅದಕ್ಕೆ ಸಾಕಾದಷ್ಟು ವರ್ಕ್ ಲೋಡು ಇದೆಯೇ ಇಲ್ಲವೇ ಎನ್ನುವುದನ್ನು ವಿಚಾರ ಮಾಡಿ ಪರಿಶೀಲನೆ ಮಾಡಬೇಕೆಂದು ಹೈಕೋರ್ಟಿಗೆ ಸಲಹೆ ಮಾಡಿ ಶೇಕಡಾ ಐವತ್ತರಷ್ಟು ಕೇಸುಗಳು ಒಂದು ತಾಲ್ಲೂಕಿನಲ್ಲಿದ್ದರೆ ಅಂತಹ ಸಂದರ್ಭಗಳನ್ನು ಸರಕಾರದ ಗಮನಕ್ಕೆ ಕಳುಹಿಸಿ ಆವರ ಪ್ರಪೋಸಲ್ ಕಳುಹಿಸಬೇಕೆಂದು ಸೂಚನೆ ಕೊಡಲಾಗಿದೆ. ಇದುವರೆಗೆ ಅವರಿಂದ ಯಾವ ಸೂಚನೆಗಳೂ ಬಂದಿಲ್ಲ.

COMPENSATION FOR LANDS ACQUIRED IN UPPER KRISHNA PROJECT.

28. Sri RAJA PID NAIK (Shorapur).—

Will the Minister for Revenue be pleased to state:—

(*a*) the extent of land acquired for the Upper Krishna Project;

(*b*) whether compensation has been paid to all persons for the land acquired;

(*c*) if not, the number of persons to whom the compensation is still to be paid ?

Sri N. HUTCHAMASTHY GOWDA (Minister for Revenue).—

(*a*) 2,232 acres.

(*b*) Yes.

(*c*) Does not arise in view of reply to clause (*b*).

Sri RAJA PID NAIK.—May I know the total amount of compensation paid for lands acquired and how much was paid direct to the land-owners

† ಶ್ರೀ ಎನ್. ಹುಚ್ಚಮಾಸ್ತಿಗೌಡ.—2232 ಎಕರೆಗಳಿಗೆ ಎಂದು 27, 48, 638 ರೂಪಾಯಿಗಳನ್ನು ಕೊಡಲಾಗಿತ್ತು. ಮನೆಗಳನ್ನು ಅಕ್ಕಿಸಾಲರು ಮಾಡಿಕೊಳ್ಳುವುದಕ್ಕಾಗಿ 10, 56, 253 ರೂಪಾಯಿಗಳನ್ನು ಕೊಡಲಾಗಿದೆ.

Sri RAJA PID NAIK.—Since the middle men are taking away a large portion of the compensation, will the Government make arrangements for the compensation direct to the land-owners in future and see that land-owners are benefited ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಜಮೀನುದಾರರಲ್ಲಿ ಯಾರ ಹೆಸರಿನಲ್ಲಿ ಖಾತೆ ಇದೆಯೋ ಅವರಿಗೇ ಈಗ ಹಣವನ್ನು ಕೊಡುತ್ತಿರುವುದು.

Sri RAJA PID NAIK.—To my question (b) you were pleased to say 'YES'. Many of them have not received their money and that is kept in suspence by the middlemen saying that the Government have not yet sanctioned. If such cases are brought to the notice of the Government, will they take suitable action ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಖಂಡಿತವಾಗಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

Sri J. P. SARWESH.—May I know how much of compensation you have paid per acre for dry land and wet land ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿವರಗಳು ನನ್ನ ಹತ್ತಿರ ಇಲ್ಲ.

Sri B. B. SAYANAK.—When the land was acquired by the Government and when the Compensation is paid, I want to know.

Sri N. HUTCHMASTHI GOWDA.—I am sorry, I do not have these dates with me.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಭೂಮಿಯನ್ನು ಸರಕಾರದವರು ವಹಿಸಿಕೊಳ್ಳುವಾಗ ಇಂತಹವರಿಗೆ ಮೊದಲೇ ಇಷ್ಟು ಹಣ ಕೊಡಬೇಕೆಂದು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರತಿಯೊಬ್ಬರಿಗೂ ಪರಿಹಾರ ದ್ರವ್ಯವನ್ನು ಬೇಗನೆ ಕೊಡುವ ವ್ಯವಸ್ಥೆ ಮಾಡಲಾಗಿದೆ ಮತ್ತು ಅವರಂತೆ ಮೊದಲೇ ಕೊಡುವ ಸೂಚನೆ ಕೂಡ ಕೊಡರಾಗಿದೆ.

Sri PRABHAKAR TELKAR.—Was it quite essential to acquire these 2232 acres of land in order to start this Upper Krishna Project at this juncture ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಟ್ಟು 31,845 ಎಕರೆ ಬೇಕು ಎಂದು ಇದೆ. ಅದರಲ್ಲಿ 26,931 ಎಕರೆ ಭೂಮಿ ಮತ್ತು 3,649 ಮನೆಗಳು. ಮುಳುಗಡೆ ಆಗತಕ್ಕ ಪ್ರದೇಶ, ನಾರೆ ಮತ್ತು ಇತರ ಅನುಕೂಲಗಳಿಗೋಸ್ಕರ ಅಕ್ಕಿಸಾಲರ್ ಮಾಡಿಕೊಳ್ಳಬೇಕೆಂದು ಇರಾಖೆಯಿಂದ ಸಲಹೆ ಬಂದಿತ್ತು. ಇತ್ತೀಚೆಗೆ 18,426 ಎಕರೆ ಭೂಮಿ ಮತ್ತು 3,075 ಕಟ್ಟಡಗಳ ಅವಶ್ಯಕವಿಲ್ಲ ಎಂದು ಬರೆದರು. ತಿರುಗಿ ಚೀಫ್ ಇಂಜಿನಿಯರ್ ಅವರು ಇದನ್ನು ಕೈ ಬಿಡಬಾರದು, ಹಾಗೆಯೇ ಇಟ್ಟು ಕೊಂಡಿರಬೇಕು ಎಂದು ಕೂಡ ಬರೆದಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಭೂಮಿಯನ್ನು ಸ್ವಾಧೀನ ಪಡಿಸಿಕೊಂಡ ಮೇಲೆ ಹತ್ತಾರು ವರ್ಷಗಳ ನಂತರ ಪರಿಹಾರ ಕೊಡುವುದನ್ನು ತಪ್ಪಿಸಲು ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡರಾಗಾಯಿತು ರೆಂಟರ್ ಕಾಂಪೆನ್‌ಸೇಷನ್ ಎಂದು ಕೊಡಬೇಕಾದ ಅಗತ್ಯವಿತ್ತು. ಆದುದರಿಂದ ಈಗ

ಆದಷ್ಟು ಬದಲಾವಣೆ ಮಾಡಿ ಭೂಮಿಯನ್ನು ತೆಗೆದುಕೊಂಡ ಕೂಡಲೇ ಪರಿಹಾರ ದ್ರವ್ಯವನ್ನು ಕೊಡುವ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ವಿಶ್ವನಾಥ ರೆಡ್ಡಿ.—ಅವಾರ್ಡ್ ಪಾಸ್ ಮಾಡುವುದಕ್ಕೆ ಕನಿಷ್ಠ ಒಂದೂವರೆ, ಎರಡು ವರ್ಷ ಹಿಡಿಯುತ್ತದೆ. ಅಲ್ಲಿಯವರೆಗೂ ರೆಂಟಲ್ ಕಾಂಪೆನ್‌ಸೇಷನ್ ಕೊಡುವುದನ್ನು ತೆಗೆದು ಹಾಕಿದರೆ ರೈತರಿಗೆ ತೊಂದರೆಯಾಗುತ್ತದೆಯಾದ್ದರಿಂದ ಅದನ್ನು ಪುನರ್‌ಪರಿಶೀಲನೆ ಮಾಡುತ್ತಾರೆಯೇ ? ಮತ್ತು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ಕೂಡಲೇ ಪರಿಹಾರ ದ್ರವ್ಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ನಾನು ಹೇಳಿದಂತೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡರೆ, ಅದಕ್ಕೆ ಪರಿಹಾರ ಎಷ್ಟರಮಟ್ಟಿಗೆ ಕೊಡಬೇಕಾಗುತ್ತದೆ ಅದನ್ನು ಕೊಡುವವರೆಗೂ ರೆಂಟಲ್ ಕಾಂಪೆನ್‌ಸೇಷನ್ ಕೊಡಲೇಬೇಕು. ಈಗ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ಕೂಡಲೇ ಪರಿಹಾರ ದ್ರವ್ಯವನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಅದು ಸಾಧ್ಯವಿಲ್ಲದೆ ಇರುವ ಸಂದರ್ಭದಲ್ಲಿ ರೆಂಟಲ್ ಕಾಂಪೆನ್‌ಸೇಷನ್ ಕೊಡುವುದಕ್ಕೆ ಬದಲಾಗಿ ಪರಿಹಾರ ದ್ರವ್ಯ ಎಷ್ಟು ಕೊಡಬಹುದೋ ಅದರಲ್ಲಿ ಶೇಕಡ 75 ಭಾಗದಷ್ಟಾದರೂ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕ ನ್ಯಾಯದಲ್ಲಿ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ.

N.R.W.S. SCHEME AT AYNUR

40. Sri S. M. SHEERNALY CHANDRASEKHAR (Hosanagar).—

Will the Minister for Community Development and Social Welfare be pleased to state :—

the reasons for the delay in the works of National Rural Water Supply Scheme at Aynur, Shimoga Taluk ?

Sri M. MALLIKARJUNA SWAMY (Minister for Community Development and Social Welfare).—

1. Due to delay in the payment of popular contribution of 10 per cent of the estimated cost by the panchayat concerned ; and

2. As there was no response to the tenders called for.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸಾರ್ವಜನಿಕರು ಮುಂದೆ ಬರದೆ, ಪಂಚಾಯಿತಿಯವರು ಜವಾಬ್ದಾರಿ ತೆಗೆದುಕೊಳ್ಳದೆ ಇರುವುದರಿಂದ ಕೆಲಸ ಪ್ರಾರಂಭವಾಗಿಲ್ಲ ಎಂದು ಹೇಳಿದ್ದಾರೆ. ಆದರೆ ಪಂಚಾಯಿತಿಯವರು ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದು ಸಾರ್ವಜನಿಕರು ಎಂತಿಗೆ ಕೊಡಬೇಕೋ ಅವನ್ನು ಕೊಚ್ಚಿದ್ದಾರೆ. ಆದರೆ ಇಲಾಖೆಯವರು ಕೆಲಸ ತೆಗೆದುಕೊಳ್ಳದೆ ಇರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರಾರಂಭದಲ್ಲಿ ಪಂಚಾಯಿತಿಯವರು ಮುಂದೆ ಬರಲಿಲ್ಲ. ಆಮೇಲೆ ಅವರು ಕೊಡಬೇಕಾದ ವಂತಿಗೆ 12,250 ರೂಪಾಯಿ ಕೊಟ್ಟರು. ಆಗ ಸರ್ಕಾರದವರು 16-6-69 ರಲ್ಲಿ ಮಂಜೂರಾತಿಯನ್ನು ಕೊಟ್ಟರು. ಮತ್ತೆ ಅಂದಾಜುಗಳು ಪುನರ್ವಿಮರ್ಶೆಯಾಗಬೇಕಾಗಿ ಬಂದು 2,05,700 ರೂಪಾಯಿಗಳಿಗೆ ಏರಿತು. ಆ ಪ್ರಕಾರ ಇನ್ನೂ 8320 ರೂಪಾಯಿ ಬಾಕಿ ಕೊಡಬೇಕಾದ ಪ್ರಯುಕ್ತ ಸರ್ಕಾರದವರು ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಮತ್ತೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಸಂಖ್ಯೆ 60 ಪರ್ಸೆಂಟ್ ಇದೆ ಎಂಬ ಗೊತ್ತಾವು ಮೇಲೆ ಮತ್ತೆ ಸರ್ಕಾರದವರು ಒಂದು ಆರ್ಡರ್ ಮಾಡಿ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಡಬೇಕಾಗಿಲ್ಲ ಎಂದು ವಿನಾಯಿತಿಯನ್ನು ಕೂಡ ಕೊಟ್ಟಿದ್ದೇವೆ. ಆದಾದಮೇಲೆ ಕರೆಂಟ್ ಷೆಡ್ಯೂಲ್ ರೇಟ್ ಪ್ರಕಾರ ಮೂರನೆಯ ಸಲ 2,45,000 ರೂಪಾಯಿಗಳಿಗೆ ಅಂದಾಜುಗಳು ತಯಾ